

## ಪ್ರಕೃತಿ ಮತ್ತು ಅಪ್ಪಂದಿರು

ಅಪ್ಪಂದಿರು ಬೇಜವಾಬ್ದಾರರಾಗಿದ್ದರೆ ಹಾಗಿರುವುದಕ್ಕೆ ಅವರಿಗೆ ಪ್ರಕೃತಿಯ ಬೆಂಬಲವೂ ಸ್ವಲ್ಪಮಟ್ಟಿಗೆ ಇದೆ! ಜೀವವಿಕಾಸದ ಸರಣಿಯಲ್ಲಿ ಕೆಳಮಟ್ಟದಲ್ಲಿರುವ ಎಷ್ಟೋ ಜೀವಿಗಳಲ್ಲಿ ಹೆಣ್ಣು ಗರ್ಭ ಧರಿಸಿದ ಮೇಲೆ ಅದಕ್ಕೆ ಕಾರಣವಾದ ಗಂಡು ನಗಣ್ಯವಾಗುತ್ತದೆ. ನಮ್ಮ ಸುತ್ತಲೂ ಕಾಣುವ ಹಸು, ನಾಯಿಗಳಂತಹ ಸಸ್ತನಿ ಸಾಕುಪ್ರಾಣಿಗಳಲ್ಲಿಯೂ ಗಂಡಿನ ಜವಾಬ್ದಾರಿ ಹೆಣ್ಣನ್ನು ಒಲೈಸಿ ಕೂಡುವುದು ಮತ್ತು ನಂತರ ಮತ್ತೊಂದು ಹೆಣ್ಣನ್ನು ಹುಡುಕುವುದು ಮಾತ್ರ! ಆದರೆ ಪಕ್ಷಿಗಳು, ಕಾಡುಪ್ರಾಣಿಗಳು ಮುಂತಾದ ಇತರ ಸಾಕಷ್ಟು ಜೀವಿಗಳಲ್ಲಿ ಮಗು ಸ್ವಂತಂತ್ರವಾಗಿ ಬದುಕುವವರೆಗೂ ಅಪ್ಪಅಮ್ಮಂದಿರು ಒಟ್ಟಾಗಿರುತ್ತಾರೆ. ಆಗ ಆಹಾರ ಮತ್ತು ರಕ್ಷಣೆಯನ್ನು ಒದಗಿಸುವುದರಲ್ಲಿ ಅಪ್ಪಂದಿರ ಪಾಲಿದ್ದರೂ ಬೇಟೆಯಾಡಿ ಆಹಾರವನ್ನು ಗಳಿಸಿಕೊಳ್ಳುವ ತರಬೇತಿಯನ್ನು ಅಮ್ಮಂದಿರು ಕಲಿಸುವ ಸಾಧ್ಯತೆಗಳೇ ಹೆಚ್ಚು. ಕಾಡುಪ್ರಾಣಿಗಳ ಬಗೆಗೆ ಅಪಾರವಾದ ಅಧ್ಯಯನವನ್ನು ಮಾಡಿರುವ ನರಭಕ್ಷಕ ಹುಲಿಗಳ ಬೇಟೆಗಾರ ಕೆನೆತ್ ಆಂಡರ್ಸನ್ ಹೇಳುವ ಪ್ರಕಾರ ಗಂಡು ಹುಲಿ ತನ್ನದೇ ಮರಿಯನ್ನು ಕೊಲ್ಲುವ ಸಾಧ್ಯತೆಗಳಿರುತ್ತವೆ. ಹಾಗಾಗಿ ಗರ್ಭ ಧರಿಸಿದ ನಂತರ ಹೆಣ್ಣು ಹುಲಿ ಗಂಡಿನಿಂದ ದೂರಹೋಗಿ ಒಂದೆರೆಡು ವರ್ಷಗಳ ನಂತರ ಮರಿಗಳು ಸ್ವತಂತ್ರವಾದ ಮೇಲೆ ಆ ಪ್ರದೇಶಕ್ಕೆ ಮತ್ತೆ ಹಿಂತಿರುಗುತ್ತದೆ.

ಮದುವೆ, ಶಿಕ್ಷಣ, ಉದ್ಯೋಗ ಮುಂತಾದ ಸಾಮಾಜಿಕ ವ್ಯವಸ್ಥೆಗಳನ್ನು ಸೃಷ್ಟಿಸಿಕೊಂಡಿರುವ ಇವತ್ತಿನ ಸಂಸ್ಕೃತಿ ಅಪ್ಪಂದಿರಿಂದ ಹೆಚ್ಚಿನ ಸಹಾಯ ಸಹಕಾರಗಳನ್ನು ನಿರೀಕ್ಷಿಸುತ್ತಿದೆ. ಆದರೆ ಲಕ್ಷಾಂತರ ವರ್ಷಗಳಿಂದ ವಿಕಾಸ ಹೊಂದುತ್ತಾ ಬಂದಿರುವ ಪುರುಷನ ಮೆದುಳಿನಲ್ಲಿ ಪ್ರಾಣಿಪ್ರಪಂಚದ ಕುರುಹುಗಳು ಇನ್ನೂ ಉಳಿದಿರಬಹುದೇ ಎಂದು ತಿಳಿಯಲು ಯಾವುದೇ ಮಾರ್ಗಗಳಿಲ್ಲ. ಅಧ್ಯಯನಗಳ ಪ್ರಕಾರ ಎಲ್ಲಾ ರೀತಿಯ ಆತಂಕಗಳನ್ನು ಪುರುಷರು ನೇರವಾಗಿ ವ್ಯಕ್ತಪಡಿಸದೆ ಅದನ್ನು ನಶೆಯ ವಸ್ತುಗಳು, ಸಾಮಾಜಿಕ ಹಿಂಸೆಯ ಮೂಲಕವೂ ಹೊರಹಾಕುವ ಸಾಧ್ಯತೆಗಳಿರುತ್ತವೆ.

ಮಕ್ಕಳ ಮತ್ತು ಅಪ್ಪಂದಿರ ಬಾಂಧವ್ಯ ಗಟ್ಟಿಯಾಗುವುದು ಒಡನಾಟದಿಂದ. ಅಪ್ಪಂದಿರೂ ಕೂಡ ಒಮ್ಮೆ ಅಮ್ಮನ ಮಗುವಾಗಿದ್ದರು ಎನ್ನುವುದನ್ನು ಮರೆಯುವಂತಿಲ್ಲ. ಹಾಗಾಗಿ ತಮ್ಮ ಹುಟ್ಟಿನ ಕುಟುಂಬದಿಂದ ತಂದಿರುವ ಮಾನಸಿಕ ತುಮುಲಗಳ ಹೊರೆಯನ್ನು ಅವರೂ ಕೂಡ ತಮಗರಿವಿಲ್ಲದೆ ಮಕ್ಕಳಿಗೆ ಕೊಡುತ್ತಿರುತ್ತಾರೆ. ಹಾಗಾಗಿ ಪೋಷಕರಿಬ್ಬರೂ ಮಕ್ಕಳ ಬಗೆಗೆ ಸಮಾನವಾದ ಜವಾಬ್ದಾರಿಯನ್ನು ಹೊತ್ತು ತಮ್ಮತಮ್ಮ ಅಂತರಂಗವನ್ನು ಶೋಧಿಸಿಕೊಂಡರೆ ಮಕ್ಕಳ ಜೊತೆಗಿನ ಬದುಕು ಸುಂದರ ಅನುಭವವಾಗುತ್ತದೆ.

ಆಪ್ತ ಸಮಾಲೋಚನೆಗೆ ಬಂದುಹೋದ ಮೇಲೆ ಅವರು ಮಗುವನ್ನು ಏಳು ಗಂಟೆಗೆ ಒಮ್ಮೆ ಎಚ್ಚರಿಸಿ ಸುಮ್ಮನಾದರು. ಅವತ್ತು ತಡವಾಗಿದ್ದಕ್ಕೆ ಅವನು ಶಾಲೆಗೆ ಹೋಗಲಿಲ್ಲ. ಅದಕ್ಕಾಗಿ ಅವರು ಮಗುವನ್ನು ದೂರದೆ ಎಂದಿನ ಪ್ರೀತಿಯನ್ನೇ ತೋರಿಸಿದರು. ಮರುದಿನ ರಜೆ ಚೀಟಿ ಕಳಿಸುವಾಗ ಸುಳ್ಳು ಕಾರಣಗಳನ್ನು ಬರೆಯಲು ನಿರಾಕರಿಸಿದರು. ಇದರಿಂದ ಮಗುವಿಗೆ ದೊರಕುತ್ತಿದ್ದ ಕೃತಕ ರಕ್ಷಣಾ ಕವಚ ಕಳಚಿಹೋಯಿತು. ಅವತ್ತು ಮಗುವಿಗೆ ಶಾಲೆಯಲ್ಲಿ ಅವಮಾನಿತನಾದ ಅನುಭವವಾಗಿದ್ದು ನಿಜ. ಆದರೆ ಅದು ಅವನ ತಲೆಯಲ್ಲಿನ ಜೈವಿಕ ಗಡಿಯಾರವನ್ನು ಎಚ್ಚರಿಸಿತ್ತು. ಕೆಲವೇ ದಿನಗಳಲ್ಲಿ ಅವನು ಸರಿಯಾದ ಸಮಯಕ್ಕೆ ಎದ್ದು ಶಾಲೆಗೆ ತಯಾರಾಗತೊಡಗಿದ. ಅಪ್ಪಅಮ್ಮಂದಿರು ಅವನ ಬದಲಾದ ಸ್ಥಿತಿಯನ್ನು ತಮ್ಮ ಪ್ರಯತ್ನದ ಪ್ರತಿಫಲ ಎಂದುಕೊಳ್ಳದೆ ಸಹಜವಾಗಿ ಒಪ್ಪಿಕೊಂಡಾಗ ಅವಮಾನದ ನೋವಿನಿಂದ ಅವನು ಕಲಿತಿದ್ದ. ಮನೆಯಲ್ಲಿ ಬೆಳಗಾದ ಕೂಡಲೆ ದಿನನಿತ್ಯ ನಡೆಯುತ್ತಿದ್ದ ಹೋರಾಟದ ಅಂತ್ಯವಾಗಿತ್ತು. ಮಗನಿಗೆ ಆಗಬಹುದಾದ ಅವಮಾನ ನೋವುಗಳನ್ನು ತಪ್ಪಿಸುವ ಪ್ರಯತ್ನದಲ್ಲಿಯೇ ಇದ್ದರೆ ಪೋಷಕರು ಅವನಿಗೆ ಶಿಸ್ತಿನ ಪಾಠಗಳನ್ನು ಕಲಿಸಲು ಸಾಧ್ಯವಾಗುತ್ತಿತ್ತೇ?

ವಾಸ್ತವವಾಗಿ ಮಗುವಿಗೆ ಆಗಬಹುದಾದ ಅವಮಾನ, ನೋವು ತಮ್ಮದೇ ಎಂದು ಪೋಷಕರು ತಿಳಿದುಕೊಂಡಿದ್ದರು. ತಮ್ಮ ನೋವನ್ನು ತಪ್ಪಿಸಿಕೊಳ್ಳುವ ಆತಂಕಕ್ಕೆ ಪ್ರೀತಿಯ